**<u>ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**<u>ಸಿ. ಸಿ. ನಂಬರಃ 157/2023</u>**

**ಫಿರ್ಯಾದುದಾರರು** ಸೆಂಟ್ ಮಿಲಾಗ್ರೀಸ್ ಕ್ರೇಡಿಟ್ ಸೌಹಾರ್ದ ಕೊಯೋಪರೇಟಿವ್,
ಇದರ ಪರವಾಗಿ ಪ್ರತಿನಿಧಿಸುವವರು
ಮ್ಯಾನೇಜರ್
ಶ್ರೀ ಅರುಣ್ ತಿಮ್ಮಪ್ಪ ನಾಯ್ಕ

**– ವಿರುದ್ಧ –**

**ಆರೋಪಿತರು** ಶ್ರೀ ವಿಷ್ಣು ರಾಮಚಂದ್ರ ನಾಯ್ಕ
ಸಾಃ ಅಮ್ಮರ್ , ಆಡಕುಲಾ, ಆಡಕುಲಾ ಅಂಚೆ,
ಹೊನ್ನಾವರ.

**<u>ಆಪಾದನೆ</u>**

ಆರೋಪಿತರಾದ ನೀವು ಪಿರ್ಯಾದಿದಾರ ಸಂಸ್ಥೆಯಿಂದ ದಿನಾಂಕಃ 16-05-2020 ರಂದು ರೂ.50,000/- (ರೂಪಾಯಿ ಐವತ್ತು ಸಾವಿರ ಮಾತ್ರ) ಸಾಲವನ್ನು ಪಡೆದಿದ್ದು , ಸಾಲದ ಮರುಪಾವತಿಗಾಗಿ ದಿನಾಂಕ 16-09-2022 ರ ಕ್ಯಾನರಾ ಬ್ಯಾಂಕಿನ ಚೆಕ್ ನಂಬರ್ 246826 ರೂ.75,000/- (ಎಪತ್ತೈದು ಸಾವಿರ ಮಾತ್ರ) ಎಂದು ನಮೂದಿಸಿ ಫಿರ್ಯಾದಿ ಸಂಸ್ಥೆಯವರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸಂಸ್ಥೆಯವರು ಫೆಡರಲ್ ಬ್ಯಾಂಕ, ಭಟ್ಕಳ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 21-09-2022 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 23-09-2022 ರಂದು ತಮ್ಮ ವಕೀಲರ ಮೂಲಕ ನೋಟಸ್ ನ್ನು ರಜಿಸ್ಟರ ಅಂಚೆ ಮುಖಾಂತರ ನಿಮಗೆ ಕಳುಹಿಸಿ ಚೆಕ್ಕಿನ ಹಣವನ್ನು ಪಾವತಿಸುವಂತೆ ಸೂಚಿಸಿದ್ದು, ಸದ್ರಿ ನೋಟಿಸು ನಿಮಗೆ ದಿನಾಂಕಃ 01-10-2022 ಜ್ಯಾರಿಯಾಗಿರುತ್ತದೆ ಮತ್ತು ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೆಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – Yes

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – Pleaded not guilty.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**Sd/-**

**(ಶ್ರೀಮತಿ.ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕ: 21-09-2024 ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.